ಕರಾಸಕೈಅನಿನಿ

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಯೋಜನೆ:ಅನುಷ್ಠಾನ:ಪ.ಜಾ:ಪ.ಪಂ:ಹಂಚಿಕೆ:2016/2091 ದಿನಾಂಕ 21-09-2016

## ಸೇರ್ಪಡೆ ಆದೇಶ

ವಿಷಯ: **ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.50ರ ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನ / ಶೆಡ್‌ಗಳನ್ನು ಹಂಚಿಕೆ ಮಾಡುವ ಬಗ್ಗೆ – ಸೇರ್ಪಡೆ ಕುರಿತು.**

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 22.07.2015
2) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 08.10.2015
3) ದಿನಾಂಕ 22.06.2016ರ ನಿಗಮದ 339ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
4) ಸರ್ಕಾರಿ ಆದೇಶ ಸಂಖ್ಯೆ ಸಿಐ 81 ಸಿಎಸ್‌ಸಿ 2015 ಬೆಂಗಳೂರು, ದಿನಾಂಕ 27.06.2016
5) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಯೋಜನೆ ಅನುಷ್ಠಾನ:ಪ.ಜಾ:ಪ.ಪಂಗಡ:ಹಂಚಿಕೆ: 2016 ದಿನಾಂಕ 22.07.2016
6) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 81 ಸಿಎಸ್‌ಸಿ 2016 ದಿನಾಂಕ 01.09.2016

-----

<u>ಪ್ರಸ್ತಾವನೆ:</u>

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ (5)ರ ನಿಗಮದ ಕಛೇರಿ ಆದೇಶದಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸರ್ಕಾರದ ಆದೇಶದನ್ವಯ ಕೆಲವೊಂದು ನಿಬಂಧನೆಗೊಳಪಟ್ಟು ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇಕಡಾ 50ರ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದ್ದು, ಸದರಿ ಆದೇಶವು ದಿನಾಂಕ 01.04.2016 ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ.

ಉಲ್ಲೇಖ (6)ರಲ್ಲಿನ ಸರ್ಕಾರದ ಸೇರ್ಪಡೆ ಆದೇಶದಲ್ಲಿ, ಸರ್ಕಾರದ ದಿನಾಂಕ 27.06.2016ರ ಸರ್ಕಾರಿ ಆದೇಶವನ್ನು ದಿನಾಂಕ 01.04.2016 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ ನಂತರ, "ದಿನಾಂಕ 01.04.2016ರ ನಂತರ ನಿವೇಶನ / ಶೆಡ್‌ಗಳನ್ನು ಕೆ.ಎಸ್.ಎಸ್.ಐ.ಡಿ.ಸಿ. / ಕೆ.ಐ.ಎ.ಡಿ.ಬಿ ಸಂಸ್ಥೆಗಳಿಂದ ಹಂಚಿಕೆ ಪತ್ರ (Allotment letter) ಪಡೆದ ಫಲಾನುಭವಿಗಳು ಈ ಆದೇಶದ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ" ಎಂದು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು ಎಂಬುದಾಗಿ ನಮೂದಿಸಲ್ಪಟ್ಟಿದೆ. ಸದರಿ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶ.

## ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಕಛೇರಿ ಆದೇಶ ಸಂಖ್ಯೆ ಸಮನ್ವಯ:ಯೋಜನೆ ಅನುಷ್ಠಾನ:ಪ.ಜಾತಿ:ಪ.ಪಂ:ಹಂಚಿಕೆ:2016/1293 ದಿನಾಂಕ 27.07.2016ರ ಆದೇಶದಲ್ಲಿ, ಕೆಲವೊಂದು ನಿಬಂಧನೆಗೊಳಪಟ್ಟು

..2..

ನಿಗಮದ ವತಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ **ಉದ್ಯಮಿಗಳಿಗೆ** ಹಂಚಿಕೆ ಮಾಡುವ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇಕಡಾ 50ರ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದ್ದು, ಸದರಿ ಆದೇಶದ ಎರಡನೇ ಕಂಡಿಕೆಯಲ್ಲಿ ಈ ಆದೇಶವು ದಿನಾಂಕ 01-04-2016 ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಎಂದು ನಮೂದಿಸಲಾಗಿದ್ದು, ಈ ಸಾಲಿನ ನಂತರ **"ದಿನಾಂಕ 01-04-2016ರ ನಂತರ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಹಂಚಿಕೆ ಪತ್ರ (Allotment Letter) ಪಡೆದ ಫಲಾನುಭವಿಗಳು ಈ ಆದೇಶದ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ"** ಎಂಬುದಾಗಿ ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು ಎಂದು ಆದೇಶಿಸಲಾಗಿದೆ.

ಉಳಿದಂತೆ, ಸದರಿ ಕಛೇರಿ ಆದೇಶದಲ್ಲಿನ ಅಂಶಗಳಲ್ಲಿ ಯಾವುದೇ ರೀತಿಯ **ಬದಲಾವಣೆಗಳು** ಇರುವುದಿಲ್ಲ.

21.9.16

ವ್ಯವಸ್ಥಾಪಕ ನಿರ್ದೇಶಕರು